ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1211
ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)
ಉತ್ತರಿಸುವ ದಿನಾಂಕ : 22.09.2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಜಮೀನುಗಳಲ್ಲಿ ಎಷ್ಟು ವಿಧ; ಅವು ಯಾವುವು; ಅವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾಗಿ ಮಾಹಿತಿ ಕೊಡುವುದು)	ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 2(8) ರಂತೆ 1) ಖುಷ್ಕಿ ಭೂಮಿ 2) ತರಿಭೂಮಿ 3) ಬಾಗಾಯಿತು ಭೂಮಿ (i) ಖುಷ್ಕಿ ಬಾಗಾಯಿತು ಭೂಮಿ (ii) ತರಿ ಬಾಗಾಯಿತು ಭೂಮಿ 4) ತೋಟಗಾರಿಕೆ ಭೂಮಿ ಎಂದು ವರ್ಗೀಕರಿಸಲಾಗಿದೆ.
ಆ)	ಕುಮ್ಕಿ, ಭಾಣೆ, ಜಮ್ಮ ಹಾಗೂ ಇತರ ಜಮೀನುಗಳು ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಬರುತ್ತವೆ; ಇವುಗಳ ವಿಚಾರದಲ್ಲಿ ಸರ್ಕಾರದ ಮುಂದಿರುವ ಸವಾಲುಗಳೇನು; (ವಿವರವಾದ ಮಾಹಿತಿ ಕೊಡುವುದು)	ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 79 (2) ರಲ್ಲಿ ತಿಳಿಸಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಮ್ಕಿ ಭೂಮಿಗಳು, ಬಾಣೆ ಭೂಮಿಗಳು ಮತ್ತು ಕಾಣೆ ಭೂಮಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿನ ಬೆಟ್ಟ ಭೂಮಿಗಳು ಮತ್ತು ಹಾಡಿ ಭೂಮಿಗಳು, ಮೈಸೂರು ಪ್ರದೇಶದಲ್ಲಿನ ಕಾನು ಮತ್ತು ಸೊಪ್ಪಿನ ಬೆಟ್ಟ ಭೂಮಿಗಳು, ಕೊಡಗಿನ ಜಮ್ಮಾ ಮತ್ತು ಬಾಣೆ ಭೂಮಿಗಳು, ಹೈದರಾಬಾದ್ ಪ್ರದೇಶದಲ್ಲಿನ ಮೋಟಸ್ಥಲ್ ತರಿ ಭೂಮಿಗಳು ಬರುತ್ತದೆ. 2021-22 ನೇ ಸಾಲಿನ ಆಯವ್ಯಯ ಭಾಷಣದ ಖಂಡಿಕೆ 306 ರಲ್ಲಿ ಮೂಲ ಗೇಣಿದಾರರು, ಕುಮ್ಕಿ ಜಮೀನು, ಖಾನೇ, ಬಾನೇ, ಡೀಮ್ಡ್ ಅರಣ್ಯ ಸಾಗುವಳಿದಾರರ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಪ್ರತ್ಯೇಕ ಸಮಿತಿಯನ್ನು ರಚಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಪ್ರತ್ಯೇಕ ಸಮಿತಿಯನ್ನು ರಚಿಸಲು ಕ್ರಮವಹಿಸಲಾಗುತ್ತಿದೆ.
ಇ)	ಸಾರ್ವಜನಿಕ ಉಪಯೋಗದ ಹಕ್ಕನ್ನು ತಗ್ಗಿಸಿ ಯಾವ ಯಾವ ವಿಧದ ಜಮೀನುಗಳನ್ನು ಯಾವ ಯಾವ ಉದ್ದೇಶಗಳಿಗಾಗಿ ಮಂಜೂರು ಮಾಡಬಹುದಾಗಿರುತ್ತದೆ;(ವಿವರವಾದ ಮಾಹಿತಿ ಕೊಡುವುದು)	ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 97(4) ರಡಿ ಗೋಮಾಳ ಜಮೀನನ್ನು ಗೋಮಾಳ ಶೀರ್ಷಿಕೆಯಿಂದ ತಗ್ಗಿಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿರದಂತಹ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಇವುಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 68 ರಡಿ ಪ್ರಕ್ರಿಯೆ ನಡೆಸಿ ಸರ್ಕಾರಿ ಉದ್ದೇಶಗಳಿಗೆ ಮಂಜೂರು ಮಾಡಬಹುದಾಗಿರುತ್ತದೆ.

....2)

ಈ)	ತುಮಕೂರು ಜಿಲ್ಲಾ ವ್ಯಾಪ್ತಿಯ ತುಮಕೂರು, ತುರುವೇಕೆರೆ, ಗುಬ್ಬಿ ತಾಲ್ಲೂಕುಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಹಾಲಿ ಲಭ್ಯವಿರುವ ಗೋಮಾಳ ಹಾಗೂ ಖರಾಬು ಜಮೀನು ಎಷ್ಟು; (ವಿವರವಾಗಿ ಸರ್ವೆ ನಂಬರ್ ವಾರು ಮಾಹಿತಿ ಕೊಡುವುದು)	ತುಮಕೂರು ಜಿಲ್ಲಾ ವ್ಯಾಪ್ತಿಯ ತುಮಕೂರು, ತುರುವೇಕೆರೆ, ಗುಬ್ಬಿ ತಾಲ್ಲೂಕುಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಹಾಲಿ ಲಭ್ಯವಿರುವ ಗೋಮಾಳ ಹಾಗೂ ಖರಾಬು ಜಮೀನುಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಉ)	ಸದರಿ ಇಲಾಖೆಯು ಕಳೆದ 2 ವರ್ಷಗಳಿಂದ ಕಿಯೋನಿಕ್ಸ್ ನಿಗಮದ ವತಿಯಿಂದ ಯಾವ ಯಾವ ಸೇವೆಗಳನ್ನು ಪಡೆಯಲಾಗಿರುತ್ತದೆ? (ವಿವರವಾದ ಮಾಹಿತಿ ಕೊಡುವುದು)	ತುಮಕೂರು ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ ಕಿಯೋನಿಕ್ಸ್ ನಿಗಮದ ವತಿಯಿಂದ ಒಟ್ಟು 68 ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು ಪಡೆಯಲಾಗಿರುತ್ತದೆ. ವಿವರಗಳನ್ನು ಈ ಕೆಳಕಂಡಂತಿದೆ: 1. ಅಟಲ್ ಜನಸ್ನೇಹಿ ಅಪರೇಟರ್‌ಗಳು ನಾಡಕಛೇರಿಗಳಿಗೆ - 50 2. ತಾಲ್ಲೂಕು ಕಛೇರಿಗಳಿಗೆ ಆರ್‌ಟಿಸಿ ಆಪರೇಟರ್‌ಗಳು - 10 3. ಸ್ಪಂದನ ಆಪರೇಟರ್ - 02 4. ಆಧಾರ್ ಆಪರೇಟರ್ - 01 5. ಎಂಪಿಎಲ್‌ಡಿಎಸ್ - 03 6. ಎಂಎಲ್‌ಎಡಿಎಸ್ - 01 7. ವಾಹನ ಚಾಲಕರ ಹುದ್ದೆಗೆ - 01

ಆರ್‌ಡಿ 170 ಎಲ್‌ಜಿಕ್ಯೂ 2021

(ಆರ್. ಅಶೋಕ)
ಕಂದಾಯ ಸಚಿವರು.